# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

ಕೆಎಸ್‌ಕ್ಯುಎಎಸಿ, ಮಲ್ಲೇಶ್ವರಂ, ಬೆಂಗಳೂರು–560003.

## KARNATAKA SCHOOL EXAMINATION AND ASSESSMENT BOARD

KSQAAC, Malleshwaram, Bengaluru–560003.

## ಮೌಲ್ಯಾಂಕನ – ಮಾರ್ಚ್ 2024 – ಮಾದರಿ ಪ್ರಶ್ನೋತ್ತರ ಪತ್ರಿಕೆ

## Assessment - March 2024 Model Paper

**ತರಗತಿ : 9** **ವಿಷಯ : ದ್ವಿತೀಯ ಭಾಷೆ ಕನ್ನಡ** **ಅಂಕಗಳು : 80**
**ಸಮಯ : 3 ಗಂಟೆ**

**ವಿದ್ಯಾರ್ಥಿಗಳು ಭರ್ತಿ ಮಾಡಬೇಕಾಗಿರುವ ಮಾಹಿತಿ**

ವಿದ್ಯಾರ್ಥಿಯ ಹೆಸರು : ____________________

ವಿದ್ಯಾರ್ಥಿಯ SATS ಸಂಖ್ಯೆ : | | | | | | | | | | ವಿದ್ಯಾರ್ಥಿಯ ಸಹಿ : ____________

**ಕೊಠಡಿ ಮೇಲ್ವಿಚಾರಕರು ಭರ್ತಿ ಮಾಡಬೇಕಾಗಿರುವ ಮಾಹಿತಿ**

ಶಾಲೆಯ ಡೈಸ್ ಕೋಡ್ : | | | | | | | | | | | |

ಶಾಲೆಯ ಹೆಸರು : ____________________

ಕ್ಲಸ್ಟರ್ : ____________ ಬ್ಲಾಕ್ : ____________ ಜಿಲ್ಲೆ : ____________

ಶಾಲೆಯ ವಿಧ : ಸರ್ಕಾರಿ ☐ ಅನುದಾನಿತ ☐ ಅನುದಾನ ರಹಿತ ☐

(ಅನ್ವಯಿಸುವ ಮಾಹಿತಿಗೆ "✓" ಗುರುತು ಹಾಕಿರಿ)

ಕೊಠಡಿ ಮೇಲ್ವಿಚಾರಕರ ಸಹಿ : ____________

**ಮೌಲ್ಯಮಾಪನ ಸಮಯದಲ್ಲಿ ಶಿಕ್ಷಕರು ಭರ್ತಿ ಮಾಡಬೇಕಾದ ಮಾಹಿತಿ**

| ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು | ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು | ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು |
|---|---|---|---|---|---|
| 1 | | 14 | | 27 | |
| 2 | | 15 | | 28 | |
| 3 | | 16 | | 29 | |
| 4 | | 17 | | 30 | |
| 5 | | 18 | | 31 | |
| 6 | | 19 | | 32 | |
| 7 | | 20 | | 33 | |
| 8 | | 21 | | 34 | |
| 9 | | 22 | | 35 | |
| 10 | | 23 | | 36 | |
| 11 | | 24 | | 37 | |
| 12 | | 25 | | 38 | |
| 13 | | 26 | | | |
| ಒಟ್ಟು ಅಂಕಗಳು | | ಒಟ್ಟು ಅಂಕಗಳು | | ಒಟ್ಟು ಅಂಕಗಳು | |
| | | | | ಒಟ್ಟು ಗಳಿಸಿದ ಅಂಕ | |

ಒಟ್ಟು ಗಳಿಸಿದ ಅಂಕಗಳು (ಅಕ್ಷರಗಳಲ್ಲಿ) ____________________

ಮೌಲ್ಯಮಾಪಕರ ಸಹಿ : ____________

# ಕನ್ನಡ ದ್ವಿತೀಯ ಭಾಷೆ

**I.** ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ **4 x 1 = 4**

**1.** ನಿಮ್ಮ ಪುಸ್ತಕದಲ್ಲಿ ಬಣ್ಣದ ತಗಡಿನ ತುತ್ತೂರಿ ಕಾಸಿಗೆ ಕೊಂಡನು ಕಸ್ತೂರಿ ಪದ್ಯ ಓದಿದ್ದೀರಲ್ಲಾ ಇವರೇ ಅದನ್ನು ಬರೆದವರು; ಈ ಮೇಲಿನ ವಾಕ್ಯದಲ್ಲಿ ಅಡಿಗೆರೆ ಎಳೆದ ಪದದ ವಿಭಕ್ತಿ.

A. ಪ್ರಥಮಾ B. ದ್ವಿತೀಯಾ

C. ಷಷ್ಠಿ D. ಸಪ್ತಮಿ

ಉತ್ತರ: ☐ ____________________

**2.** ಒಂದಿಷ್ಟು ಹಾಲು ಕುಡಿದು ಹೋಗಬೇಕು.

ಈ ವಾಕ್ಯದಲ್ಲಿ ಅನುಸ್ವಾರ ಹೊಂದಿದ ಪದ ಗುರುತಿಸಿ.

A. ಹಾಲು B. ಕುಡಿದು

C. ಒಂದಿಷ್ಟು D. ಹೋಗಬೇಕು

ಉತ್ತರ: ☐ ____________________

**3.** ಪಿಳಿ ಪಿಳಿ ಗಿಳಿ ಗೊಂಬೆ ಚಂದ.

ಇಲ್ಲಿ ಪಿಳಿಪಿಳಿ ಪದವು.

A. ದ್ವಿರುಕ್ತಿ B. ಅನುಕರಣಾವ್ಯಯ

C. ಜೋಡುನುಡಿ D. ನುಡಿಗಟ್ಟು

ಉತ್ತರ: ☐ ____________________

**4.** ದೇವಸುಂದರಿಯಂತಿದ್ದ ಬೆಸ್ತರ ಹುಡುಗಿಯ ಮೇಲೆ ಶಂತನುವಿಗೆ ಆಸೆಯಾಯಿತು.

ಇಲ್ಲಿ 'ಆಸೆಯಾಯಿತು' ಪದವು,

A. ಆಗಮಸಂಧಿ B. ಆದೇಶಸಂಧಿ

C. ಗುಣಸಂಧಿ D. ಲೋಪಸಂಧಿ

ಉತ್ತರ: ☐ ____________________

**II. ಗದ್ಯ ಮತ್ತು ಪದ್ಯದ ಭಾಗಗಳನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

**12 x 1 = 12**

'ಪ್ರಯಾಣಕ್ಕಾಗಿ ಪ್ರಯಾಣ' ಎನ್ನುವ ಶೋಕಿಲಾಲನೂ ನಾನಲ್ಲ. ಇಲ್ಲಿಯವರೆಗೆ ನಾನು ಸಂದರ್ಶಿಸಿದ ಸ್ಥಳಗಳಾಗಲಿ ನಾಡಿನವರ ಬಾಯಲೆಲ್ಲ ನಲಿಯುತ್ತಿರುವ ಸ್ಥಳಗಳು. ನನ್ನ ಮಟ್ಟಿಗೆ ನಕಾಶದೊಳಗಿನ ಹೆಸರುಗಳು ಮಾತ್ರ. ಪ್ರವಾಸ ಕಥನಗಳನ್ನು ಅಷ್ಟಿಷ್ಟು ಓದಿದ ನಾನು ಆಯಾ ಊರುಗಳನ್ನು ಪ್ರತ್ಯಕ್ಷ ಕಂಡವರಿಗಿಂತ ಚೆನ್ನಾಗಿ ಬಲ್ಲೆ. ನನ್ನ ಪ್ರವಾಸದ ಕ್ಷೇತ್ರ ಸಣ್ಣದಿರಬಹುದು, ಆದರೆ ಅದರಲ್ಲಿ ನಾನು ಕಂಡ ರಸದ ಒರತೆ ಮಾತ್ರ ದೊಡ್ಡದು. ಜೀವನದಲ್ಲಿ ಕಾಣಸಿಗದ ಸ್ವಾರಸ್ಯ ನನಗೆ ಪ್ರವಾಸದಲ್ಲಿ ದೊರಕಿದೆ. ಬಾಳು ಬರಿದಾಗಿ ಕಂಡಾಗ ಏನಾದರೂ ನೆಪ ಹೂಡಿ ಪ್ರವಾಸ ಕೈಗೊಳ್ಳುತ್ತೇನೆ. ಪ್ರವಾಸವೆಂದರೆ ನನಗೆ ಅದೊಂದು ಸುಖ ಪ್ರಸಂಗ

5. ಲೇಖಕರು ತಾವು ಯಾವ ರೀತಿಯ ಪ್ರಯಾಣಿಕರಲ್ಲ ಎಂದಿದ್ದಾರೆ?

6. ಜೀವನದಲ್ಲಿ ಎಲ್ಲೂ ಕಾಣದ ಸ್ವಾರಸ್ಯವನ್ನು ಲೇಖಕರು ಎಲ್ಲಿ ಕಂಡುಕೊಂಡಿದ್ದಾರೆ?

7. ಲೇಖಕರ ಪ್ರಕಾರ ಪ್ರವಾಸವೆಂದರೆ ಯಾವುದು ?

ಉರುಸುಗಳು ಹಿಂದೂ ಮತ್ತು ಮುಸ್ಲಿಂ ಸಂಸ್ಕೃತಿಗಳ ಮಧುರ ಮಿಲನದಿಂದ ಹುಟ್ಟಿ ಬೆಳೆದು ಬಂದವುಗಳಾಗಿವೆ. ಕಲಬುರ್ಗಿಯ ಖ್ವಾಜಾ ಬಂದೇನವಾಜ್ ದರ್ಗಾ ಧರ್ಮ ಸಮನ್ವಯ ದೃಷ್ಟಿಗೆ ಪುರಾವೆಯಾಗಿದೆ. ಮುಳುಬಾಗಿಲು ಪ್ರಾಂತದ ಹಜರತ್ ಬಾಬಾ ಹೈದರವಲಿ ಶಾ ಅವರ ಉರುಸಿನಲ್ಲಿ ಪ್ರದರ್ಶನಗೊಳ್ಳುವ ಕತ್ತಿವರಸೆ, ದೊಣ್ಣೆವರೆಸಿ, ಕುಸ್ತಿ, ಕವ್ವಾಲಿ ಕಾರ್ಯಕ್ರಮಗಳು ಕೋಮು ಸಾಮರಸ್ಯದ ಪ್ರತೀಕಗಳಾಗಿವೆ.

ಈ ಗದ್ಯಭಾಗವನ್ನು ಓದಿ ಕ್ರ. ಸಂ. 8 ರಿಂದ 11 ರವರೆಗಿನ ಪ್ರಶ್ನೆಗಳನ್ನು ಉತ್ತರಿಸಿ.

8. ಉರುಸುಗಳಲ್ಲಿ ಮಿಲನವಾಗಿರುವ ಸಂಸ್ಕೃತಿಗಳು ಯಾವುವು?

9. ಖ್ವಾಜಾ ಬಂದೇನವಾಜ್ ದರ್ಗಾ ಯಾವುದಕ್ಕೆ ಪುರಾವೆಯಾಗಿದೆ ?

10. ಹಜರತ್ ಬಾಬಾ ಹೈದರವಲಿ ಶಾ ಅವರ ಉರುಸ್ ಪ್ರದರ್ಶನಗೊಳ್ಳುವ ಪ್ರಾಂತ್ಯ ಯಾವುದು?

11. ಕೋಮು ಸಾಮರಸ್ಯಕ್ಕೆ ಉರುಸ್‌ನಲ್ಲಿ ಯಾವ ಯಾವ ಕಲೆಗಳು ಪ್ರದರ್ಶನಗೊಳ್ಳುತ್ತವೆ?

ವಿಂದ್ಯಾಟವಿಯಲ್ಲಿ ಇದ್ದಳು ಶಬರಿ
ರಾಮನ ಕನಸೇ ಮರವಾಗಿ
ಮರದಲ್ಲರಳಿದ್ದವು ಹೂಗಳು
ರಾಮನಾಮವೇ ಜೇನಾಗಿ

ಈ ಪದ್ಯ ಭಾಗವನ್ನು ಓದಿ ಕ್ರ. ಸಂಖ್ಯೆ 12 ರಿಂದ 14 ರ ವರೆಗಿನ ಪ್ರಶ್ನೆಗಳನ್ನು ಉತ್ತರಿಸಿ.

12. ಶಬರಿ ಎಲ್ಲಿ ವಾಸವಾಗಿದ್ದಳು?

13. ಶಬರಿಗೆ ರಾಮ ನಾಮವು ಹೇಗೆ ಪರಿಣಮಿಸಿತು?

14. **'ಕನಸೇ ಮರದಲ್ಲರಳಿದ್ದವು ಹೂಗಳು'** ಎಂಬ ಸಾಲು ಯಾರನ್ನು ಕುರಿತು ಹೇಳುವುದನ್ನು ತಿಳಿಸುತ್ತಿದೆ?

ಮುಗಿಲು ಚಂದ ಮಳೆಯು ಚಂದ
ತೋಯ್ದು ಗುಡ್ಡ ಬೆಟ್ಟ ಚಂದ
ಮಿಟ್ಟೆ ಹೂ ಪಕಳೆ ಚಂದ
ಮೊಟ್ಟೆ ಚಂದ ಹಾಕ್ಕಿ ಚೆಂದ
ಎಲ್ಲಕ್ಕಿಂತ ನಮ್ಮ ಮನೆಯ
ತೊಟ್ಟಿಲಿನ ತೊದಲು ಚಂದ

ಈ ಪದ್ಯ ಭಾಗವನ್ನು ಓದಿ ಕ್ರ. ಸಂಖ್ಯೆ 15 ರಿಂದ 16 ರ ವರೆಗಿನ ಪ್ರಶ್ನೆಗಳನ್ನು ಉತ್ತರಿಸಿ.

15. ಕವಯಿತ್ರಿಗೆ ಚಂದವಾಗಿ ಕಂಡ ಪ್ರಕೃತಿಯ ಅಂಶಗಳು ಯಾವವು?

16. ಕವಯಿತ್ರಿಗೆ ಎಲ್ಲದಕ್ಕಿಂತಲೂ ಚಂದವಾಗಿ ಕಂಡದ್ದು ಯಾವುದು?

**III. ಗದ್ಯ ಮತ್ತು ಪದ್ಯ ಭಾಗಗಳನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

**8 x 2 = 16**


ಕುವೆಂಪು ಅವರು ತಮ್ಮ ಮಕ್ಕಳಿಗೆ ಭಿಕ್ಷಕ್ಕೆ ಬರುವರೆಲ್ಲ ಸಾಧಾರಣವಾಗಿ ಮೋಸಗಾರರು ಅಥವಾ ಕದಿಯಲು ಏನಾದರೂ ಇದೆಯೆ ಎಂದು ನೋಡಿಕೊಂಡು ಹೋಗಲು ಬರುವ ಕಳ್ಳರು, ಇಲ್ಲವೇ ದುಡಿದು ತಿನ್ನಲು ಇಷ್ಟವಿಲ್ಲದ ಸೋಮಾರಿಗಳು ಆಗಿರುತ್ತಾರೆ. ಆದ್ದರಿಂದ ಅವರಿಗೆ ಭಿಕ್ಷೆ ಹಾಕಿ ಪ್ರೋತ್ಸಾಹಿಸಬಾರದು ಎಂದು ಹೇಳುತ್ತಿದ್ದರು. ಮಕ್ಕಳು ಅವರ ಬೋಧನೆಯನ್ನು ಶಿರಸಾವಹಿಸಿ ಯಾರು ಮನೆಗೆ ಬಂದರೂ ಮುಂದೆ ಹೋಗಪ್ಪ ಎಂದು ಕೂಗುತ್ತಿದ್ದರು. ಒಂದು ಸಾರಿ ಬಿಳಿಯ ಅಡ್ಡ ಪಂಚೆ, ಬಿಳಿಯ ಅಂಗಿ, ಮೈಮೇಲೆ ನಸು ಕಂದು ಬಣ್ಣದ ಧೋತ್ರ ಮತ್ತು ಬಗಲಲ್ಲಿ ದೊಡ್ಡ ಜೋಳಿಗೆಯಂತ ಚೀಲ ಇದ್ದವರೊಬ್ಬ ಮನೆಯ ಚಿಕ್ಕ ಗೇಟನ್ನು ತೆರೆಯಲು ಸಾಹಸ ಪಡುತ್ತಿದ್ದರು.

ಈ ಪದ್ಯ ಭಾಗವನ್ನು ಓದಿ ಕ್ರ. ಸಂಖ್ಯೆ 17 ರಿಂದ 18 ರ ವರೆಗಿನ ಪ್ರಶ್ನೆಗಳಗೆ ಉತ್ತರಿಸಿ.

17. ಕುವೆಂಪು ಅವರು ಭಿಕ್ಷೆ ನೀಡಿ ಪ್ರೋತ್ಸಾಹಿಸಬಾರದು ಎಂದು ಹೇಳಲು ಕಾರಣವೇನು?

18. ಮನೆಯ ಚಿಕ್ಕ ಗೇಟನ್ನು ತೆರೆಯಲು ಸಾಹಸ ಪಡುತ್ತಿದ್ದ ವ್ಯಕ್ತಿಯ ವೇಷಭೂಷಣಗಳನ್ನು ತಿಳಿಸಿ.

19. ಈ ಚಿತ್ರದಲ್ಲಿರುವ ವ್ಯಕ್ತಿಯನ್ನು ಗುರುತಿಸಿ ಹೆಸರು ಬರೆದು ಇವರು ಧರ್ಮ ಮತ್ತು ವಿಜ್ಞಾನಕ್ಕೆ ಸಂಬಂಧಿಸಿದಂತೆ ನೀಡಿದ ಹೇಳಿಕೆಯನ್ನು ಬರೆಯಿರಿ.




ಅಟ್ಟ ಹತ್ತದವನು
ಬೆಟ್ಟ ಹತ್ತುತ್ತಾನೆಂದು ತೋರಿಸಬೇಕಾಗಿದೆ.
ಅಟ್ಟ ಮನುಷ್ಯ ಕಟ್ಟಿರುತ್ತಾನೆ
ಬೆಟ್ಟ ಅವನಿಂದ ನಿರ್ಮಿತವಲ್ಲ
ಅದಕ್ಕೆ ಅಟ್ಟ ನೋಡದೆ ಬೆಟ್ಟ ಹತ್ತುತ್ತೇನೆ
ಮೇಲೇರಿ ನಿಲ್ಲುತ್ತೇನೆ.

ಈ ಪದ್ಯ ಭಾಗವನ್ನು ಓದಿ ಕ್ರ.ಸಂಖ್ಯೆ 20 ರಿಂದ 21ರ ವರೆಗಿನ ಪ್ರಶ್ನೆಗಳಗೆ ಉತ್ತರಿಸಿ.

20. ಅಟ್ಟ ಹತ್ತದವನು ಬೆಟ್ಟ ಹತ್ತುತ್ತಾನೆಂದು ಏಕೆ ತೋರಿಸಬೇಕಾಗಿದೆ?

21. ಅಟ್ಟ ಮತ್ತು ಬೆಟ್ಟದ ನಡುವಿನ ವ್ಯತ್ಯಾಸಗಳನ್ನು ಕವಿ ಹೇಗೆ ಗುರುತಿಸಿದ್ದಾನೆ?

22.



ಈ ಚಿತ್ರದ ಸನ್ನಿವೇಶ ವ್ಯಕ್ತಪಡಿಸುವ ಅಂಶಗಳನ್ನು ಬರೆಯಿರಿ.

23.



ಈ ರಾಷ್ಟ್ರಕವಿಯನ್ನು ಹೆಸರಿಸಿ. ವಿದ್ಯೆಯ ಕರ್ತವ್ಯವನ್ನು ಕುರಿತು ಇವರು ನೀಡಿದ ಒಂದು ಸಂದೇಶವನ್ನು ಬರೆಯಿರಿ.

24.  ಚಿತ್ರದಲ್ಲಿರುವ ವ್ಯಕ್ತಿಯನ್ನು ಹೆಸರಿಸಿ. ಇವರ ಒಂದು ಸಾಧನೆ ತಿಳಿಸಿ.

**IV.** **1 x 3 = 3**

25.  ಚಿತ್ರದಲ್ಲಿರುವ ಸಾಹಿತಿಯನ್ನು ಹೆಸರಿಸಿ. ಇವರ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ.

**V. ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ.** **2 x 3 = 6**

26. ಯಾವಾಗೋ ಕೋಳಿ ಕೂಗಿಹುದು ಏಳಿ. ತಡವೇಕೆ ಪಾನಕೇಳಿ
ಮೊದಲಾಗಲೀಗ ಅಂಗಡಿಯ ಕದವ ಈಕ್ಷಣಕೆ ತೆರೆಯ ಹೇಳಿ
ಜೀವನದ ನದಿಗೆ ಸೆಳವಿಹುದು, ಮರಣ ಬಂದೀತಕ್ಷಣವು ಮರಳಿ
ಹೋದವರು ತಿರುಗಿ ಬಂದಾರೆ, ಅವರು ಬರಲಿಕ್ಕೂ ಇಲ್ಲ ಮರಳಿ

27. 

ಈ ಚಿತ್ರವನ್ನು ಗುರುತಿಸಿ, ಬೆಳಗಿನ ಜಾವದ ಸನ್ನಿವೇಶವನ್ನು ನಿಮ್ಮೂರಿನ ಬೆಳಗಿನ ವರ್ಣನೆಯೊಂದಿಗೆ ಹೋಲಿಸಿ ಬರೆಯಿರಿ.

**VII.** ಕೆಳಗೆ ಕೊಟ್ಟಿರುವ ಗಾದೆ ಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು ವಿಸ್ತರಿಸಿ ಬರೆಯಿರಿ.

28. ಹಾಸಿಗೆ ಇದ್ದಷ್ಟು ಕಾಲು ಚಾಚು **1 x 3 = 3**

ಅಥವಾ

ಆಳಾಗಿ ದುಡಿ ಅರಸನಾಗಿ ಉಣ್ಣು

VIII. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 5 x 3 = 15

29. "ಡಿ.ಎಲ್.ಎನ್ ಎಂದರೆ ಪಾಂಡಿತ್ಯ, ಪಾಂಡಿತ್ಯವೆಂದರೆ ಡಿ.ಎಲ್.ಎನ್"

30. ಮಕ್ಕಳಿಲ್ಲದಿದ್ದರೂ ನನಗೆ ಉತ್ತಮವಾದ ಲೋಕ ದೊರೆಯುತ್ತದೆ.

31. ಉಸಿರಾಡದೆ ನಿಂತರು ಜನರೆಲ್ಲಾ.

32. ಬಡವನ ಮನೆಗೆ ಸಿರಿ ಬರಲಿ.

33. ಮೃಡ ಭಕ್ತರ ನುಡಿಗಡಣವೆ ಕಡೆಗೀಲು ಕಾಣೇ ರಾಮನಾಥ.

**IX. ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ ಬರೆಯಿರಿ** **1 x 4 = 4**

**ಇದ್ದ ಮಾತನಾಡು** ______________________

______________________

______________________

______________________ **ಕಂಡ್ಯ ನಾಲಿಗೆ.**

**ಅಥವಾ**

**ಬಡವರ ಮಾತಿಗೆ** ______________________

______________________

______________________

______________________ **ಹರಿಯೆಂದು ನಾಲಿಗೆ.**

X. **ಕೆಳಗಿನ ಪ್ರಶ್ನೆಗೆ 8 ಅಥವಾ 10 ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **1 x 4 = 4**



ಚಿತ್ರವನ್ನು ಗಮನಿಸಿ ಅರಳಿಕಟ್ಟೆಯ ಉಪಯೋಗಳನ್ನು ನೀವು ಮೆಚ್ಚುವ ಅಂಶಗಳೊಂದಿಗೆ ಬರೆಯಿರಿ.

ಅಥವಾ

"ಮರಗಳು ನಮಗಾಗಿ ಭೂಮಿಗಿಳಿದ ವರಗಳಾಗಿವೆ."

ಈ ಹೇಳಿಕೆಯನ್ನು ಸಮರ್ಥಿಸಿ ಉತ್ತರ ಬರೆಯಿರಿ.

**XI. ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **2 + 2 = 4**

36. ಉಜ್ಜಯನಿಯ ರಾಜಕುಮಾರ ಯಶೋಧರ. ತಂದೆ ಯಶೌಘ, ತಾಯಿ ಚಂದ್ರಮತಿ, ಪತ್ನಿ ಅಮೃತಮತಿ. ಯಶೋಧರ ಅಮೃತಮತಿಯರು ಅನ್ಯೋನ್ಯವಾಗಿದ್ದು ಸುಖದಿಂದಿದ್ದರು. ಅತ್ಯಂತ ಚೆಲುವ, ಸುಂದರ, ಸಕಲ ವಿದ್ಯಾಪಾರಂಗತ ಹಾಗೂ ಸುಸಂಸ್ಕೃತನಾದ ಯಶೋಧರನ ಪತ್ನಿ ಅಮೃತಮತಿಯು ಕುರೂಪಿಯಾದ ಅಷ್ಟಾವಂಕ ಮಾವಟಿಗನ ಗಾನಮಾಧುರ್ಯಕ್ಕೆ ಮನಸೋತು ಪತಿಗೆ ದ್ರೋಹ ಬಗೆಯುವಳು. ಪತ್ನಿಯ ಹೇಯಕೃತ್ಯವನ್ನು ಕಣ್ಣಾರೆಕಂಡ ಯಶೋಧರನು ಅತ್ಯಂತ ಖಿನ್ನನಾಗುವನು. ತಾಯಿ ಚಂದ್ರಮತಿದೇವಿಯು ಪರಿಪರಿಯಾಗಿ ಬೇಡಿಕೊಂಡಾಗ ಮನಸ್ಸಿನ ಖಿನ್ನತೆಗೆ ಕಾರಣವನ್ನು ಹೇಳಲಾಗದೆ ಕಳೆದರಾತ್ರಿ ದುಸ್ವಪ್ನವೊಂದನ್ನು ಕಂಡದ್ದಾಗಿ ಹೇಳುವನು. ಸ್ವಪ್ನದೋಷ ನಿವಾರಣೆಗಾಗಿ ಪ್ರಾಣಿಬಲಿಯನ್ನು ಕೊಡಲು ಒಪ್ಪದೇ ತಾಯಿಯ ಸಮಾಧಾನಕ್ಕಾಗಿ ಹಿಟ್ಟಿನಿಂದ ಮಾಡಿದ ಕೋಳಿಯೊಂದನ್ನು ಬಲಿಕೊಡಲು ಒಪ್ಪುವನು. ಹಿಟ್ಟಿನ ಕೋಳಿಯನ್ನು ಬಲಿಕೊಟ್ಟಾಗ ಅದರೊಳಗೆ ಅಡಗಿದ್ದ ಬೆಂತರವೊಂದು ಕೂಗಿ ಅಸುನೀಗಿತು. ಇದರಿಂದ ಮತ್ತೂ ಖಿನ್ನನಾದ ಯಶೋಧರನು, ಮಗನಾದ ಯಶೋಮತಿಗೆ ಪಟ್ಟಕಟ್ಟಿ ಕಾಡಿಗೆ ತಪಕ್ಕೆ ಹೊರಡಲು ಅನುವಾಗುವನು. ವಿಷಯ ತಿಳಿದ ಅಮೃತಮತಿಯು, ಗಂಡ ಹಾಗೂ ಅತ್ತೆಯನ್ನು ವಿಷವಿಕ್ಕಿ ಕೊಲ್ಲುವಳು.

**ಪ್ರಶ್ನೆಗಳು :**

ಅ) ಯಶೋಧರ ರಾಜನ ಸ್ವಪ್ನದೋಷ ನಿವಾರಣೆಗೆ ತಾಯಿ ನೀಡಿದ ಉಪದೇಶವನ್ನು ಈಡೇರಿಸಿದ ಸನ್ನಿವೇಶವನ್ನು ನಿಮ್ಮ ಮಾತುಗಳಲ್ಲಿ ವರ್ಣಿಸಿ.

______________________________

______________________________

______________________________

______________________________

______________________________

ಆ) ಅಮೃತಮತಿಯು ತನ್ನ ಗಂಡ ಹಾಗೂ ಅತ್ತೆಯನ್ನು ವಿಷವಿಕ್ಕಿ ಕೊಂದಿದ್ದು ಸರಿಯೇ? ಸ್ಪಷ್ಟಕಾರಣಗಳೊಂದಿಗೆ ನಿಮ್ಮದೇ ಮಾತುಗಳಲ್ಲಿ ವಿವರಿಸಿ.

______________________________

______________________________

______________________________

______________________________

______________________________

**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ.** **1 x 4 = 4**

37. ರಾಷ್ಟ್ರೀಯ ಹಬ್ಬಗಳ ಮಹತ್ವ

ಅಥವಾ

ಅರಣ್ಯ ಸಂರಕ್ಷಣೆಯ ಅಗತ್ಯತೆ

**XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ** **1 x 5 = 5**

38. ನಿಮ್ಮನ್ನು ಧಾರವಾಡದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ ಕೌಸರ್ ಎಂದು ಭಾವಿಸಿಕೊಂಡು ಶಾಲಾ ಗ್ರಂಥಾಲಯಕ್ಕೆ ಸಾಹಿತ್ಯದ ಪುಸ್ತಕಗಳನ್ನು ಕಳುಹಿಸಿ ಕೊಡುವಂತೆ ಜಿಲ್ಲಾ ಗ್ರಂಥಪಾಲರಿಗೆ ಪತ್ರ ಬರೆಯಿರಿ.

ಅಥವಾ

ನಿಮ್ಮನ್ನು ಬೀದರ ಸರ್ಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿ ಆದಿತ್ಯ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಆಚರಿಸಿದ ಮಕ್ಕಳ ದಿನಾಚರಣೆ ಕುರಿತು ಕಾರವಾರದಲ್ಲಿರುವ ನಿಮ್ಮ ಸ್ನೇಹಿತ ರಮೇಶ್‌ಗೆ ಪತ್ರ ಬರೆಯಿರಿ.